ತಂದಿದ್ದಾರೆ, ಇದರ ಬಗ್ಗೆ ಕಂದಾಯ ಮಂತ್ರಿಗಳ ಜೊತೆ ಮಾತನಾಡಿ ಈ ದಿವಸವೇ ಈ ವಿಷಯದ ಬಗ್ಗೆ ವಸ್ತು ಸ್ಥಿತಿಯನ್ನು ತರಿಸಿಕೊಂಡು ಪರಿಹಾರ ಕೊಡುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇನೆ.

(ಖೂ) ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ವಿರೋಧ ಪಕ್ಷದ ಶಾಸಕರ ಜೊತೆ ಸಮಾಲೋಚನೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡಿ ನಾಮಕರಣ ಮಾಡುವುದಕ್ಕಾಗಿ ಉಪ ನಿಬಂಧಕರಿಗೆ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೆಂದು ತಿಳಿದುಬಂದಿದೆ. ಆದರೆ ಅಲ್ಲಿಯ ಉಪ ನಿಬಂಧಕರು ಯಾವುದೇ ವಿರೋಧ ಪಕ್ಷದ ಶಾಸಕರನ್ನು ಇದರ ಬಗ್ಗೆ ವಿಚಾರ ಮಾಡದೇ ಕೇವಲ ಜನತಾ ದಳದವರನ್ನು ಮಾತ್ರ ಕರೆದು ಇದರ ಬಗ್ಗೆ ವಿಚಾರ ಮಾಡಿ ನಾಮಕರಣ ಮಾಡುವಂಥ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಈ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ನಾನು ಕೇಳುವುದೇನೆಂದರೆ ವಿರೋಧ ಪಕ್ಷದ ಶಾಸಕರನ್ನು ತಾಲ್ಲೂಕಿನಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಇದರ ಬಗ್ಗೆ ಸಮಾಲೋಚನೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸುಮಾರು ಮೂರ್ನಾಲ್ಕು ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಪುನರ್ವಿಂಗಡಣೆಯಾಗಿತು. ಈಗ ಮತ್ತೆ ಮಾನ್ಯ ಸಹಕಾರ ಸಚಿವರು ಮತ್ತೆ ಪುನರ್ವಿಂಗಡಣೆ ಮಾಡಬೇಕೆಂದು ಇಚ್ಛಿಪಟ್ಟಿದ್ದಾರೆ. ಈ ಹಿಂದೆ ಮೂರ್ನಾಲ್ಕು ವರ್ಷಗಳ ಹಿಂದೆ ಪುನರ್ವಿಂಗಡಣೆ ಮಾಡಿದಾಗ, ಅಲ್ಲಿ ಯಾರ್ಯಾರು ಶಾಸಕರಿದ್ದರೋ ಅವರನ್ನು ಕೇಳಿಯೇ ಮಾಡಲಾಗಿತ್ತು. ವಿರೋಧ ಪಕ್ಷದ ಶಾಸಕರನ್ನು ಕೂಡ ಕೇಳಿ ಮಾಡಲಾಗಿತ್ತು. ಆದರೆ ಈ ಬಾರಿ ವಿರೋಧ ಪಕ್ಷದ ಶಾಸಕರನ್ನು ಯಾರನ್ನೂ ಕೇಳಬಾರದು ಎಂದು ಮಾನ್ಯ ಸಚಿವರು ಮೌಖಿಕ ಆದೇಶವನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಈಗ ಸಚಿವರು ಮಾಡುವುದಿರಲಿ ಅಥವಾ ಮುಖ್ಯಮಂತ್ರಿಗಳು ಮಾಡುವುದಿರಲಿ ಆಗ ಅವರು ತಮಗೆ ತಿಳಿದ ಹಾಗೆ ಮಾಡಲಿ. ಆದರೆ ಸರ್ಕಾರಿ ಅಧಿಕಾರಿಗಳು ನಾಮಕರಣ ಮಾಡುವುದರಿಂದ ಅವರು ಒಂದು ಪದ್ಧತಿಯನ್ನು ಫಾಲೋ ಮಾಡಬೇಕಾಗುತ್ತದೆ. ಅವರು ಒಂದು ಪಕ್ಷದ ಏಜೆಂಟ್ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ಕಾನೂನಿನಲ್ಲಿ ಡೆಪ್ಯುಟಿ ರಿಜಿಸ್ಟ್ರಾರವರೇ ನಾಮಕರಣ ಮಾಡಬೇಕೆಂದು ಇದೆ. ಇವರು ಅಲ್ಲಿಯ ಜನ ಪ್ರತಿನಿಧಿಗಳನ್ನು ಕೇಳಿಯೇ ಮಾಡಬೇಕು. ಇಲ್ಲದಿದ್ದರೆ ಅಲ್ಲಿರುವ ಜನರಲ್ ಬಾಡಿ ಮೆಂಬರ್ಸ್‌ಗಳ ಅಭಿಪ್ರಾಯವನ್ನು ಪಡೆದು ಅದರಂತೆ ಮಾಡಬೇಕು. ಆ ರೀತಿಯಾದರೂ ಮಾಡಿಸಲಿ.

ಶ್ರೀ ಪಿ. ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರವರು ಹೇಳಿದ ಹಾಗೆ ಹಿಂದೆ ಇವ್ವತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿರ್ಗಯವರೂ ಕೂಡ ಕೋ-ಆಪರೇಟಿವ್ ಮಿನಿಸ್ಟರ್ ಆಗಿದ್ದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇವ್ವಾಗ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವಾಗ ಅಥವಾ ಬೇರೆ ವಿಚಾರಗಳಲ್ಲಿ ಸಹಕಾರ ಸಂಘಗಳ ಬಗ್ಗೆ ಚರ್ಚೆ ಮಾಡಿರುವುದು ನಿಜ. ಆದರೆ ಶಹರದಲ್ಲಿರತಕ್ಕಂಥ ಕೋ-ಆಪರೇಟಿವ್

ಸೊಸೈಟಿ, ರೂರಲ್‌ನಲ್ಲಿ ಬರತಕ್ಕಂಥ ಕೋ-ಆಪರೇಟಿವ್ ಸೊಸೈಟಿ ಅಮಾಲಗಮೇಶನ್ ಮಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರತಕ್ಕಂಥ ವ್ಯವಸ್ಥೆ ಮತ್ತು ಕಾರ್ಪೊರೇಶನಲ್ಲಿ ಬರತಕ್ಕಂಥ ವ್ಯವಸ್ಥೆ ಬೇರೆ ಬೇರೆಯಾಗಿರುತ್ತದೆ. ಆದುದರಿಂದ ಸರ್ಕಾರ ಇದನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ಇದರಲ್ಲಿ ಎಲ್ಲಾ ಶಾಸಕರನ್ನು ಕರೆದು ಆ ಗ್ರಾಮ ಸಹಕಾರ ಸಂಘದ ವ್ಯವಸ್ಥೆಯನ್ನು ತಿಳಿದುಕೊಂಡು ನಂತರ ಪುನರ್ವಿಂಗಡಣೆ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಪುನರ ಪರಿಶೀಲಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದಂಥ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಈ ಹಿಂದೆ ಧಾರವಾಡ ಜಿಲ್ಲೆಯಲ್ಲಿ ಈ ಸಹಕಾರ ಸಂಘಗಳನ್ನು ಅಮಾಲಗಮೇಶನ್ ಮಾಡಿ ಅಲ್ಲಿ ಅವರು ಕೋರ್ಟಿಗೆ ಹೋಗಿ ಸ್ಟೇ ಆಗಿ ಅದು ಇನ್ನೂ ಕೆಲವು ಹಂತಗಳಲ್ಲಿ ಹಾಗೆಯೇ ಉಳಿದಿದೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಪ್ರತಿ ಪಂಚಾಯತಿಗೆ ಒಂದು ಸಹಕಾರ ಸಂಘವನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿರುವುದರಿಂದ, ಈ ಸಹಕಾರ ಸಂಘಗಳನ್ನೆಲ್ಲಾ ನಾವು ಒಟ್ಟುಗೂಡಿಸಿ ಆ ಸಹಕಾರ ಸಂಘಗಳಿಗೆ ನಾಮಕರಣ ಮಾಡುವುದಕ್ಕೆ ನಮ್ಮ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದೇವೆ. ಬಹುಶಃ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಆ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಯಾರನ್ನೂ ಕೇಳಿ ಮಾಡುವಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಅವರು ಜನತಾ ದಳದ ಶಾಸಕರನ್ನು ಮಾತ್ರ ಕೇಳಿ ನಾಮಕರಣ ಮಾಡುತ್ತಿದ್ದಾರೆ. ವಿರೋಧ ಪಕ್ಷದ ಶಾಸಕರನ್ನು ಯಾರನ್ನೂ ಕೇಳುತ್ತಿಲ್ಲ. ಸರ್ಕಾರ ನಾಮಕರಣ ಮಾಡಿದರೆ ಮಾಡಲಿ ಅದರಲ್ಲಿ ನನ್ನದೂ ಯಾವ ತಕರಾರು ಇಲ್ಲ. ಆದರೆ ಒಬ್ಬ ಜಿಲ್ಲೆಯ ಅಧಿಕಾರಿ ಜನತಾದಳದ ಕಾರ್ಯಕರ್ತರನ್ನು ನಾಮಕರಣ ಮಾಡುವುದಕ್ಕೆ ಅವಕಾಶವಿಲ್ಲ. ಈ ಹಿಂದೆ ಇದ್ದಂಥ ಕಾಂಗ್ರೆಸ್ ಸರ್ಕಾರ ನಮ್ಮ ತಾಲ್ಲೂಕಿನ ಜನತಾ ದಳದ ಶಾಸಕರಿಗೆ ಅವಕಾಶವನ್ನು ಕೊಟ್ಟಿದೆ. ಆದರೆ ಇವರು ಕಾಂಗ್ರೆಸ್‌ನವರಿಗಿಂತ ನಮ್ಮದು ಮೌಲ್ಯಾಧಾರಿತ ಸರ್ಕಾರ ಎಂದು ಹೇಳುತ್ತಿರುವಾಗ ಈ ವಿಷಯದಲ್ಲಿ ಹಿಂದೆ ಕಾಂಗ್ರೆಸ್ ಸರ್ಕಾರ ಮಾಡಿದ ಹಾಗೆ ಕೂಡ ಮಾಡಿಲ್ಲ.

ಅಧ್ಯಕ್ಷರು : ಈಗ ಯಾವುದೇ ಪಕ್ಷಕ್ಕೂ ಸೇರಿದವರನ್ನು ನಾಮಿನೇಟ ಮಾಡಬೇಕೆಂದರೆ ಎಲ್ಲಾ ಸೊಸೈಟಿಗಳಿಗೂ ನನ್ನನ್ನೇ ನಾಮಿನೇಟ್ ಮಾಡಬೇಕಾಗುತ್ತದೆ. ಏಕೆಂದರೆ ಈಗ ನಾನು ಯಾವುದೇ ಪಕ್ಷಕ್ಕೂ ಸೇರಿದವನಲ್ಲ.

ಶ್ರೀ ವೈ. ರಾಮಕೃಷ್ಣ : ಆ ಕ್ಷೇತ್ರದಲ್ಲಿ ಪರಿಣಿತರಾದವರು ಅದೇ ಕ್ಷೇತ್ರದಲ್ಲಿ ಸಿಕ್ಕಿದರೆ ಮಾಡಿ. ಪೂರ್ಣವಾಗಿ ರಾಜಕೀಯ ವ್ಯಕ್ತಿಗಳನ್ನು ಕನ್ಸಿಡರೇಶನ್ ಮಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಹೌದು.

ಶ್ರೀ ಯು. ಬಿ. ಬಣಕಾರ್ : ಧಾರವಾಡ ಜಿಲ್ಲೆಯ ಉಪ ನಿಬಂಧಕರು ವಿರೋಧ ಪಕ್ಷದ ಶಾಸಕರನ್ನು ಕರೆದು ಚರ್ಚಿಸಿ ನಾಮಕರಣ ಮಾಡುವುದಿಲ್ಲ ಎಂದರೆ ಹೇಗೆ? ಮಾನ್ಯ ಸಹಕಾರ ಸಚಿವರೇ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ನಾಮಕರಣ ಅವರ ಕಡೆಯವರನ್ನೇ

ಮಾಡಲಿ, ಕೊನೆಯ ಪಕ್ಷ ಜಿಲ್ಲೆಯ ಅಧಿಕಾರಿಗಳು ಶಾಸಕರನ್ನು ಕರೆಯುವ ಸೌಜನ್ಯವನ್ನಾದರೂ ತೋರಿಸದಿದ್ದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ಆ ಅಧಿಕಾರವನ್ನು ಡೆಪ್ಯುಟಿ ರಿಜಿಸ್ಟ್ರಾರರವರಿಗೆ ಕೊಟ್ಟಿದ್ದೇವೆ. ಅವರು ಅಲ್ಲಿರತಕ್ಕಂಥ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಮಕರಣ ಮಾಡುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ : ಬಹಳ ಸಂತೋಷ. ಆದರೆ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ಇವರು ಅಧಿಕಾರ ಕೊಟ್ಟಿಲ್ಲ. ಕಾನೂನು ಅಧಿಕಾರ ಕೊಟ್ಟಿದೆ. ಡೆಪ್ಯುಟಿ ರಿಜಿಸ್ಟ್ರಾರ್‌ರವರು ನಿಷ್ಪಕ್ಷಪಾತವಾಗಿ ಮಾಡಿದರೆ ಒಳ್ಳೆಯದು ಮತ್ತು ಬಹಳ ಸಂತೋಷ. ಒಂದು ವೇಳೆ ಅವರಿಂದ ಅನ್ಯಾಯವಾಯಿತು ಎಂದರೆ, ಅವರು ಒಂದು ಪಕ್ಷದ ಏಜೆಂಟ್‌ರಾಗಿ ಕೆಲಸ ಮಾಡಿದರೆ ಆಗ ನಾವು ನಮ್ಮ ರಕ್ಷಣೆಗಾಗಿ ನಿಮ್ಮ ಬಳಿ ಬರುತ್ತೇನೆ.

ಮಾನ್ಯ ಸದಸ್ಯರು : ಈ ಹಿಂದಿನ ಸರ್ಕಾರವಿದ್ದಾಗ ಏನು ಮಾಡುತ್ತಿದ್ದರೆಂದರೆ, ಮಂಡಲ ಪಂಚಾಯತಿಯನ್ನು, ಗ್ರಾಮ ಪಂಚಾಯತಿಗಳನ್ನು, ತಾಲ್ಲೂಕು ಪಂಚಾಯತಿ ಸಂಸ್ಥೆಗಳನ್ನು ವಿಂಗಡಣೆ ಮಾಡಿದರು. ಆಗ ಇದು ಅವರ ಜ್ಞಾಪಕಕ್ಕೆ ಬರಲಿಲ್ಲ. ಇದಾದಮೇಲೆ ಕೋ-ಅಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ನಾಮಿನೇಟ್ ಮಾಡಿದರು. ಆಗ ಅವರಿಗೆ ಇದು ಜ್ಞಾಪಕ ಇರಲಿಲ್ಲ. ಅದೇ ರೀತಿಯಲ್ಲಿ ಆಶ್ರಯ ಸಮಿತಿಗಳಿಗೆ ನಾಮಿನೇಟ್ ಮಾಡಿದರು. ಅವೊತ್ತು ಈ ವಿಚಾರ ಜ್ಞಾಪಕವಿರಲಿಲ್ಲ. ಸರ್ಕಾರ ನಾಮಿನೇಷನ್ ಮಾಡುವಾಗ, ತಮ್ಮ ಪಕ್ಷದವರಿಗೆ ನಾಮಿನೇಷನ್ ಮಾಡುತ್ತದೆ. ಅಧಿಕಾರಿ ನಾಮಿನೇಶನ್ ಮಾಡುವಾಗ ನಾವು ಹಿಂದೆ ಅಮಾಲ್ಗಮೇಷನ್ ಮಾಡಿದಾಗ ಸ್ಥಳೀಯ ಶಾಸಕರಿಗೂ ಕೇಳಿ, ಶಾಸಕರು ಏನು ಪಟ್ಟಿ ಕೊಟ್ಟಿದ್ದಾರೆ, ಅದನ್ನು ಮಾಡಿದ್ದಾರೆ.

(ಎ) ಹಾಸನದಲ್ಲಿ ಮಹಿಳಾ ಸಹಕಾರಿ ಬ್ಯಾಂಕ್

ಶ್ರೀ ಬಿ. ಶಿವರಾಮ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಮಹಿಳಾ ಸಹಕಾರಿ ಬ್ಯಾಂಕನ್ನು ಮಾಡತಕ್ಕಂತಹ ವಿಚಾರದಲ್ಲಿ ರಿಸರ್ವ್ ಬ್ಯಾಂಕಿನ ಆದೇಶದಂತೆ 18 ಲಕ್ಷ ರೂಪಾಯಿಗಳ ಹಣವನ್ನು ಸಂಗ್ರಹ ಮಾಡಿ ಬಹುಶಃ ಐದು ತಿಂಗಳು ಆಗಿದೆ ಎಂದು ನಾನು ತಿಳಿದಿದ್ದೇನೆ. ಇಲ್ಲಿಯವರೆಗೆ ಅದು ಸರ್ಕಾರಕ್ಕೆ ಬಂದು ರಿಜಿಸ್ಟ್ರಾರ್‌ಆಗಿಲ್ಲ. ಇದಕ್ಕೆ ಕಾರಣ ಏನು ಗೊತ್ತಿಲ್ಲ. ಸಚಿವರು ಇಲ್ಲಿದ್ದಾರೆ, ಈಗ ಆ ಪ್ರಸ್ತಾವನೆ ಬಂದಿದೆಯೋ ಇಲ್ಲವೋ ಅದು ಗೊತ್ತಿಲ್ಲ. ಬಹುಶಃ ಬಂದಿರಬಹುದು ಎಂದು ನಾನು ಭಾವಿಸಿದ್ದೇನೆ. ಇಷ್ಟು ದಿನ ವಿಳಂಬ ಆಗುವುದಕ್ಕೆ ಕಾರಣ ಏನು? ಏಕೆಂದರೆ, ಪ್ರಧಾನ ಮಂತ್ರಿಗಳು ಮಹಿಳಾ ಬ್ಯಾಂಕುಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆ ಸಹಕಾರಿ ಬ್ಯಾಂಕುಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಿದ್ದಾರೆ. ನಮ್ಮ ಜಿಲ್ಲೆ ಬ್ಯಾಂಕುಗಳಿಗೆ ಐದು ತಿಂಗಳು ಕಳೆದರೂ ರಿಜಿಸ್ಟ್ರೇಷನ್ ಆಗಿಲ್ಲ. ಇದು ಇಷ್ಟು ವಿಳಂಬವಾಗುವುದಕ್ಕೆ ಏನಾದರೂ ಮೂಲಭೂತ ಕಾರಣ ಇರಬಹುದು. ಇದಕ್ಕೆ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಬಹುಶಃ ಮಾನ್ಯ ಶಾಸಕರು ಹೇಳಿದ ಹಾಗೆ ನಾವೂ ಕೂಡ ಮಹಿಳಾ ಬ್ಯಾಂಕುಗಳಿಗೆ ಉತ್ತೇಜನ ಕೊಡುತ್ತಿದ್ದೇವೆ. ಯಾರು